**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆಃ 51/2017</u>**

ದಿನಾಂಕಃ 14.11.2018
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 17 ಪ್ರಾಸಾ - 14

| | | |
|---|---|---|
| ಹೆಸರು | ಃ | ಸುನೀಲ್ ಕುಮಾರ್ |
| ತಂದೆಯ/ಗಂಡನ ಹೆಸರು | ಃ | ವೀರಭದ್ರಯ್ಯ |
| ವಯಸ್ಸು | ಃ | 27 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ಅರೇಹಳ್ಳಿ |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ನನಗೆ ನ್ಯಾಯಾಲಯದ ಮುಂದಿರುವ 5 ನೇ ಆರೋಪಿ ಮುಜೀಬ್, 6 ನೇ ಆರೋಪಿ ರಾಜು ಮತ್ತು 7 ನೇ ಆರೋಪಿ ಮಲ್ಲೇಶ್ ಗೊತ್ತು. ನನಗೆ ನ್ಯಾಯಾಲಯದ ಮುಂದಿರುವ ಸಾಕ್ಷಿ ಪ್ರೇಮ ಗೊತ್ತಿಲ್ಲ.

2. ಸುಮಾರು ಒಂದೂವರೆ - ಎರಡು ವರ್ಷದ ಹಿಂದೆ ನಾನು ಮತ್ತು ಶಾಸ್ತಿಯಪ್ಪ ರವರ ಜೊತೆಯಲ್ಲಿ ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಗೆ ಹೋಗಿದ್ದೆ. ಅಲ್ಲಿ ಪೊಲೀಸರು ನ್ಯಾಯಾಲಯದ ಮುಂದಿರುವ ಆರೋಪಿಗಳಾದ ಮುಜೀಬ್, ರಾಜು ಮತ್ತು ಮಲ್ಲೇಶ್ ರವರನ್ನು ತಪಾಸಣೆ ಮಾಡುತ್ತಿದ್ದರು.

3. ಪೊಲೀಸರು ಮೊದಲಿಗೆ 5 ನೇ ಆರೋಪಿ ಮುಜೀಬ್‌ನನ್ನು ತಪಾಸಣೆ ಮಾಡಿದಾಗ ಆತನ ವಶದಲ್ಲಿ ರೂ.2,000 ಮುಖಬೆಲೆಯ ಒಂದು ನೋಟು ರೂ.100 ರ ಮುಖಬೆಲೆಯ 5 ನೋಟುಗಳು ಮತ್ತು ಒಂದು ಕಾರ್ಬನ್ ಮೊಬೈಲ್ ಇತ್ತು. ಅದಕ್ಕೆ ಏರ್‌ಟೆಲ್ ಸಿಮ್ ಆಗಲಾಗಿತ್ತು. ಅಲ್ಲದೇ ಮೊಬೈಲ್‌ನ ಬದಿಯಲ್ಲಿ ಇನ್ನೊಂದು ಸಿಮ್ ಇತ್ತು. ಅವುಗಳನ್ನು ಪೊಲೀಸರು ವಶಪಡಿಸಿಕೊಂಡು ಮಹಜರ್ ಬರೆದರು.

4. ಆನಂತರ ರಾಜುವನ್ನು ಶೋಧನೆ ಮಾಡಿದಾಗ ಆತನ ವಶದಲ್ಲಿ ರೂ.2,000 ಮುಖಬೆಲೆಯ ಒಂದು ನೋಟು ಇತ್ತು. ಆತ ಪೊಲೀಸರ ಮುಂದೆ ಒಂದು ಸ್ಟಾರ್ ಸಿಟಿ ಸ್ಕೂಟರ್‌ನ್ನು ಕೂಡ ಹಾಜರಪಡಿಸಿದ್ದ. ಅದರ ನಂಬರ್ ನನಗೆ ಈಗ ಜ್ಞಾಪಕ ಇಲ್ಲ. ಅವುಗಳನ್ನು ಪೊಲೀಸರು ಅಮಾನತು ಪಡಿಸಿಕೊಂಡಿದ್ದಾರೆ.

5. ಆನಂತರ ಪೊಲೀಸರು ಆರೋಪಿ ಮಲ್ಲೇಶನನ್ನು ತಪಾಸಣೆ ಮಾಡಿದಾಗ ಆತನ ವಶದಲ್ಲಿ ಏನೂ ಇರಲಿಲ್ಲ. ಪೊಲೀಸರು ಮತ್ತೆ ಏನನ್ನೂ ಅಮಾನತು ಪಡಿಸಿಕೊಂಡಿಲ್ಲ.

6. ಆಗ ಬರೆದ ಮಹಜರ್‌ಗೆ ನಾನು ರುಜು ಮಾಡಿದ್ದೇನೆ. ಸದರಿ ಮಹಜರ್‌ನ್ನು ಈಗ ನೋಡಿದೆ. ಅದರಲ್ಲಿ ನನ್ನ ರುಜು ಇದೆ. ಸದರಿ

ದಾಖಲೆಯನ್ನು ನಿಶಾನೆ ಪಿ 14 ಮತ್ತು ಸಾಕ್ಷಿಯ ರುಜುವನ್ನು ನಿಶಾನೆ ಪಿ 14(ಎ) ಎಂದು ನಿಶಾನೆ ಮಾಡಲಾಯಿತು.

7. ಪೊಲೀಸರು ವಶಪಡಿಸಿಕೊಂಡ ಕಾರ್ಬನ್ ಮೊಬೈಲ್‌ನ್ನು ನೋಡಿದರೆ ಗುರುತಿಸುತ್ತೇನೆ. ಆದರೆ ವಶಪಡಿಸಿಕೊಂಡ ಹಣ ಮತ್ತು ಮೋಟಾರ್ ಸೈಕಲ್‌ನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

8. ಈಗ ನೋಡಿದ ಮೊಬೈಲ್ ಆ ದಿವಸ ಪೊಲೀಸರು ಅಮಾನತು ಪಡಿಸಿಕೊಂಡ ಮೊಬೈಲ್ ಇರಬಹುದು. ಸಾಕ್ಷಿಯು ನೋಡಿದ ಮೊಬೈಲ್‌ನ್ನು ಗುರುತಿಗಾಗಿ ಮುದ್ದೆಮಾಲು 20 ಎಂದು ನಿಶಾನೆ ಮಾಡಲಾಯಿತು.

9. ಆಸಾಮಿಗಳು ಎಲ್ಲಿಯೋ ರಾಬರಿ ಮಾಡಿದ್ದಾರೆ ಎಂದು ಠಾಣೆಯಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಆ ಹಣ ಮತ್ತು ಸ್ಕೂಟರ್ ಆರೋಪಿಗಳಿಗೆ ಹೇಗೆ ಬಂತು ಎಂಬುವುದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ, ಪರಿಶೀಲಿಸಿದೆ. ಈ ಸಾಕ್ಷಿಯ ಸಾಕ್ಷ್ಯವು ತನಿಖಾಧಿಕಾರಿ ಸಂಗ್ರಹಿಸಿದ ಸಾಕ್ಷ್ಯಕ್ಕೆ ಭಾಗಶಃ ವಿರುದ್ಧವಾಗಿ ಕಂಡುಬಂದಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವುದು ನ್ಯಾಯಸಮ್ಮತವಾಗಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

**<u>ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ</u>**

10. ಆ ದಿವಸ ನಾನು ಠಾಣೆಗೆ ಹೋದಾಗ ಪೊಲೀಸರು ಆಸಾಮಿಗಳ ಅಂಗಶೋಧನೆ ಮಾಡಬೇಕು, ನೀವು ಸಹಕರಿಸಿ ಎಂದು ನನ್ನನ್ನು ಕೋರಿಕೊಂಡರು ಎನ್ನುವುದು ಸರಿ. ಆರೋಪಿಗಳು ದರೋಡೆ

ಮಾಡಿದ ಆಭರಣಗಳನ್ನು ಮಾರಾಟ ಮಾಡಿ ಅದರಿಂದ ಅವರ ಪಾಲಿಗೆ ಬಂದ ಹಣವನ್ನು ಪೊಲೀಸರು ಅಮಾನತು ಪಡಿಸಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ.

11. ಮಲ್ಲೇಶನ ಅಂಗಶೋಧನೆ ಮಾಡಿದಾಗ ಆತನ ವಶದಲ್ಲಿ ರೂ.100 ಮುಖಬೆಲೆಯ 15 ನೋಟುಗಳು ಮತ್ತು ಒಂದು ಓಪೋ ಮೊಬೈಲ್ ಕಂಡುಬಂತು ಎನ್ನುವುದು ಸರಿಯಲ್ಲ. ಅವುಗಳನ್ನು ಕೂಡ ಪೊಲೀಸರು ನನ್ನ ಸಮಕ್ಷಮದಲ್ಲಿಯೇ ಅಮಾನತು ಪಡಿಸಿಕೊಂಡಿದ್ದರೂ ಕೂಡ ಈಗ ಮಲ್ಲೇಶನಿಗೆ ಸಹಾಯ ಮಾಡಲು ಆತನಿಂದ ಏನನ್ನೂ ಅಮಾನತು ಪಡಿಸಿಕೊಂಡಿಲ್ಲ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲುಃ</u> ಶ್ರೀ.ಎಸ್.ಎನ್.ಜಿ. ವಕೀಲರಿಂದ – 5 ಮತ್ತು 6 ನೇ ಆರೋಪಿ ಪರವಾಗಿಃ- ಮುಂದೂಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಗೋಪಾಲ ಕೃಷ್ಣ ರೈ ಟಿ.)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.